ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 72
ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 19.12.2018
ಉತ್ತರಿಸುವವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

*****

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಅರಣ್ಯ ಉತ್ಪನ್ನಗಳ ಕಳವು ಮತ್ತು ವನ್ಯ ಜೀವಿಗಳ ಸಂತತಿ ನಾಶ ಮಾಡುವವರ ವಿರುದ್ಧ ಕಳೆದ 5 ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)	ಅರಣ್ಯ ಉತ್ಪನ್ನಗಳ ಕಳವು ಮತ್ತು ವನ್ಯ ಜೀವಿಗಳ ಸಂತತಿ ನಾಶ ಮಾಡುವವರ ವಿರುದ್ಧ ಕಳೆದ 5 ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು **<u>ಅನುಬಂಧ-1ರಲ್ಲಿ</u>** ಒದಗಿಸಿದೆ.
ಆ	ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ; ಕಳೆದ 5 ವರ್ಷಗಳಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಗೆ ದಾಖಲಾದ ಪ್ರಕರಣಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)	ಕಳೆದ 5 ವರ್ಷಗಲ್ಲಿ ಆರೋಪ ಪಟ್ಟಿ ಸಲ್ಲಿಸಿರುವ ಮತ್ತು ನ್ಯಾಯಾಲಯದಲ್ಲಿ ವಿಚಾರಣೆಗೆ ದಾಖಲಾದ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು **<u>ಅನುಬಂಧ-2ರಲ್ಲಿ</u>** ಒದಗಿಸಿದೆ.
ಇ	ಅರಣ್ಯ ಇಲಾಖೆಯಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸುವ ಅಧಿಕಾರ ಯಾವ ಅಧಿಕಾರಿಗಿದೆ;	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ವನ್ಯಜೀವಿ ಪ್ರಕರಣಗಳಿಗೆ ಮತ್ತು ವಲಯ ಅರಣ್ಯಾಧಿಕಾರಿಗಳು ಇತರೆ ಅರಣ್ಯೋತ್ಪನ್ನಗಳ ಅಪರಾಧ ಪ್ರಕರಣಗಳಿಗೆ ದೋಷಾರೋಪಣ ಪಟ್ಟಿ ಸಲ್ಲಿಸುವ ಅಧಿಕಾರವುಳ್ಳವರಾಗಿದ್ದಾರೆ.
ಈ	ಇಲ್ಲಿಯವರೆಗೆ ವಿವಿಧ ನ್ಯಾಯಾಲಯಗಳಲ್ಲಿ ಅಪರಾಧಿಗಳ ತನಿಖೆ ನಡೆಸಿ ಆರೋಪ ಪಟ್ಟಿ ಸಲ್ಲಿಸಿ ವಿಳಂಬವಾಗಿ ವಿಚಾರಣೆ ಹಂತದಲ್ಲಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು	ಇಲ್ಲಿಯವರೆಗೆ ವಿವಿಧ ನ್ಯಾಯಾಲಯಗಳ ಅಪರಾಧಿಗಳ ತನಿಖೆ ನಡೆಸಿ ಆರೋಪ ಪಟ್ಟಿ ಸಲ್ಲಿಕೆ ವಿಳಂಬವಾಗಿ ವಿಚಾರಣೆ ಹಂತದಲ್ಲಿ ಉಳಿದಿರುವ ಪ್ರಕರಣಗಳ ಸಂಖ್ಯೆ: **1833**
ಉ	ಅಧಿಕಾರಿಗಳ ಆಡಳಿತಾತ್ಮಕ ವಿಚಾರಗಳನ್ನು ನೋಡಿಕೊಳ್ಳುವುದರ ಜೊತೆಗೆ ಸರ್ಕಾರದ ಯೋಜನೆಗಳ ಅನುಷ್ಠಾನ ಹಾಗೂ ಇತರೆ ಒತ್ತಡಗಳಿಂದ ಆರೋಪ ಪಟ್ಟಿ ಸಲ್ಲಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಆಡಳಿತಾತ್ಮಕ ವಿಚಾರಗಳು, ಸರ್ಕಾರದ ಯೋಜನೆಗಳ ಅನುಷ್ಠಾನ ಕಾರ್ಯಗಳ ಜೊತೆಗೆ ಅರಣ್ಯ ಅಪರಾಧ ಪ್ರಕರಣಗಳಲ್ಲಿ ತನಿಖೆಯನ್ನು ನಡೆಸಿ ವಿವಿಧ ನ್ಯಾಯಾಲಯಗಳಿಗೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗುತ್ತಿದೆ. ಆದುದರಿಂದ ಆರೋಪಪಟ್ಟಿ ಸಲ್ಲಿಕೆಯಾಗುವಲ್ಲಿ ವಿಳಂಬವಿರುವುದಿಲ್ಲ.
ಊ	ಈ ವಿಳಂಬ ನಿವಾರಣೆಗೆ ಸರ್ಕಾರದ ಮುಂದಿರುವ ಮಾರ್ಗೋಪಾಯಗಳು ಯಾವುವು? (ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಅಪಜೀ 178 ಎಫ್‌ಎಫ್ 2018

(ಆರ್.ಶಂಕರ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಅನುಬಂಧ-1

ಕ್ರ. ಸಂ	ಜಿಲ್ಲೆ	ಅರಣ್ಯ ಉತ್ಪನ್ನಗಳ ಕಳವು ಪ್ರಕರಣಗಳು	ವನ್ಯಜೀವಿ ಸಂತತಿಗಳ ನಾಶ ಪ್ರಕರಣಗಳು
1	ಬೆಂಗಳೂರು ನಗರ	571	49
2	ಬೆಂಗಳೂರು ಗ್ರಾಮಾಂತರ	330	6
3	ರಾಮನಗರ	104	49
4	ಕೋಲಾರ	718	8
5	ಚಿಕ್ಕಬಳ್ಳಾಪುರ	785	7
6	ಬೆಳಗಾವಿ	2102	18
7	ಬಾಗಲಕೋಟೆ	1269	5
8	ಬಿಜಾಪುರ	156	3
9	ಬಳ್ಳಾರಿ	5	0
10	ಚಿತ್ರದುರ್ಗ	66	0
11	ಕೊಪ್ಪಳ	12	0
12	ಚಿಕ್ಕಮಗಳೂರು	1440	121
13	ಚಾಮರಾಜನಗರ	354	295
14	ಧಾರವಾಡ	1045	4
15	ಗದಗ	95	0
16	ಹಾವೇರಿ	178	36
17	ಹಾಸನ	1628	50
18	ತುಮಕೂರು	683	27
19	ಕಲಬುರ್ಗಿ	219	5
20	ಬೀದರ್	39	2
21	ರಾಯಚೂರು	89	9
22	ಯಾದಗಿರಿ	16	3
23	ಕೊಡಗು	841	46
24	ಮೈಸೂರು	688	116
25	ಮಂಡ್ಯ	37	43
26	ದ.ಕನ್ನಡ	2866	28
27	ಉಡುಪಿ	2400	19
28	ಶಿವಮೊಗ್ಗ	5703	77
29	ದಾವಣಗೆರೆ	846	22
30	ಕಾರವಾರ	5020	135
	ಒಟ್ಟು	**30305**	**1183**
ಒಟ್ಟು ಪ್ರಕರಣಗಳು		31488	